ಸಿ.ಸಿ..ನಂ.384/2022

ಪಿ.ಡಬ್ಲ್ಯೂ-3

ದಿನಾಂಕ.13-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** **ಆರೋಪಿ ಪರ ಶ್ರೀ ಜಿ.ವಿ.ಎನ್ ವಕೀಲರಿಂದಃ**

1. ನಿಮಗೆ ಅಧಿಕಾರ ಕೊಡುವ ಪೂರ್ವದಲ್ಲಿ ಯಾವ ದಿನಾಂಕದಂದು ಆಡಳಿತ ಮಂಡಳಿಯವರು ಸಭೆ ಕರೆದಿರುತ್ತಾರೆ ಮತ್ತು ಯಾವ ದಿನ ಠರಾವು ಆಯಿತು ಎಂದರೆ ದಿಃ 02-02-2024 ಕ್ಕೆ ನನಗೆ ಅಧಿಕಾರ ಪತ್ರ ಕೊಟ್ಟಿದ್ದು ಠರಾವು ಯಾವ ದಿನಾಂಕ ಆದದ್ದು ಎಂದು ನನಗೆ ಗೊತ್ತಿಲ್ಲ . ಆಡಳಿತ ಮಂಡಳಿಯವರು ಮಾಡಿದ ಠರಾವಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುತ್ತದೆಯಾ ಎಂದರೆ ಇಲ್ಲ ಒಬ್ಬ ವ್ಯಕ್ತಿಯು ನಿಮ್ಮ ಸಂಸೆದ.ಯಲ್ಲಿ ಸಾಲವನ್ನು ತೆಗೆಯಬೇಕಾದರೆ ಆತನು ನಿಮ್ಮ ಸಂಸೆಯ ಸದಸ್ಯನಾಗಿರಬೇಕು ಎಂದರೆ ಸರಿ .

2. ಆರೋಪಿಗೆ ಸಾಲ ಮಂಜೂರು ಮಾಡಬೇಕಾದರೆ ಆತನ ಅರ್ಹತೆ ಮೇರೆಗೆ ಸಾಲ ಮಂಜೂರು ಮಾಡಬೇಕಾಗುತ್ತದೆ ಎಂದರೆ ಸರಿ . ಆರೋಪಿಯು ನಮ್ಮ ಸಂಸ್ದೆಯಲ್ಲಿ ವ್ಯವಹಾರ ಮಾಡಿರುತ್ತಾನೆ ಆ ಆಧಾರದಲ್ಲಿ ಅವರಿಗೆ ಸಾಲ ಮಂಜೂರು ಮಾಡುತ್ತೇವೆ . ಅವರು ಮೀನು ವ್ಯವಹಾರ ಮಾಡುತ್ತಿದ್ದರು . ಆ ಮೀನು ವ್ಯವಹಾರದಿಂದ ಆರ್ಥಿಕವಾಗಿ ವರ್ಷಕ್ಕೆ ಎಷ್ಟು ಆದಾಯ ಬರುತ್ತದೆ ಅದರ ಖರ್ಚು ವೆಚ್ಚ ಎಷ್ಟು ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ. ದಿಃ 24-01-2017 ರ ಮೊದಲು ಯಾವಾಗ ಬಂದು ಸಾಲದ ಅರ್ಜಿ ಸಲ್ಲಿಸಿರುತ್ತಾರೆ ಎಂರೆ ನಿಖರವಾಗಿ ದಿನಾಂಕ ನೆನಪಿಲ್ಲ ಆದರೆ ದಿಃ 24-01-2017 ರ ಮೊದಲು . ಆರೋಪಿಗೆ ಸಾಲ ಮಂಜೂರು ಮಾಡಬೇಕೆಂದು ಯಾವ ದಿನಾಂಕದಂದು ಸಭೆ ಕರೆಯಲಾಯಿತು ಮತ್ತು ಠರಾವನ್ನು ಮಾಡಲಾಯಿತು ಎಂದರೆ ದಿನಾಂಕ ನೆನಪಿಲ್ಲ . ಆರೋಪಿಗೆ ಸಾಲ ಕೊಡುವ ಸಮಯದಲ್ಲಿ ನಾನು ಸಂಸೆದ ಯಲ್ಲಿ ನೌಕರನಾಗಿರಲಿಲ್ಲ . ಆರೋಪಿತನಿಗೆ ಸಾಲ ಮಂಜೂರು ಮಾಡುವಾಗ ಸಾಲ ಮರು ಪಾವತಿಸಲು ಒಂದು ವರ್ಷದ ಅವಧಿ ಇತ್ತು . ದಿಃ 24-01-2017 ರಿಂದ 26-08-2019 ರವರೆಗೆ ಆರೋಪಿಯು ಒಟ್ಟು ಎಷ್ಟು ರೂ ಹಣವನ್ನು ಮರು ಪಾವತಿ ಮಾಡಿರುತ್ತಾನೆ

ಎಂದರೆ ಬಾಕಿ ಇರುವ ಮೊತ್ತದ ಹಣ ಗೊತ್ತು ಆದರೆ ಎಷ್ಟು ಹಣ ಮರು ಪಾವತಿ ಮಾಡಿರುತ್ತಾರೆ ಎಂದು ನೆನಪಿಗೆ ಬರುತ್ತಿಲ್ಲ . ಆರೋಪಿಗೆ ಸಾಲವನ್ನು ನೀಡುವ ಸಮಯದಲ್ಲಿ ಎಷ್ಟು ಎಫ್ ಡಿ ಮತ್ತು ಶೇರ ವನ್ನು ಪಡೆದುಕೊಂಡಿರುತ್ತೇವೆ ಎಂದು ನೆನಪಿಲ್ಲ . ಸದ್ರಿ ಎಫ್ ಡಿ ಮತ್ತು ಶೇರ ವನ್ನು ಪಡೆದು ಕೊಂಡ ಬಗ್ಗೆ ಅದನ್ನು ಕರಾರು ಪತ್ರದಲ್ಲಿ ಮತ್ತು ಓನ್ ಡಿಮಾಂಡ ಪ್ರಾಮಿಷನರಿ ನೋಟ ದಲ್ಲಿ ನಮೂದು ಮಾಡಬೇಕು ಎಂದರೆ ಸರಿ . ನಮ್ಮ ಸಂಸ್ದೆಯಲ್ಲಿ ಆರೋಪಿಯ ಶೇರು ಮತ್ತು ಎಫ್ ಡಿ ಇರುತ್ತದೆ . ಸಾಮಾನ್ಯ ವಾಗಿ ರೂ 1 ಲಕ್ಷ ಮಂಜೂರು ಮಾಡಿದರೆ ಎಷ್ಟು ಶೇರುಗಳನ್ನು ಮತ್ತು ಎಫ್ ಡಿ ಹಣವನ್ನು ಕಡಿತ ಗೊಳಿಸುತಿಃರಿ ಎಂದರೆ ರೂ 100/- ಮೊತ್ತದ ಶೇರ ಮತ್ತು ಸಾಲದ ಹಣಕ್ಕೆ ಶೇ 10 ರಂತೆ ಎಫ್ ಡಿ ಇಟ್ಟುಕೊಳ್ಳುತ್ತಾರೆ . ಹಾಗಾದರೆ ರೂ 1 ಲಕ್ಷಕ್ಕೆ 10 ಕ್ಕೆ 10,100 ಹಾಗೂ 2 ಲಕ್ಷದ ಸಾಲದ ಹಣಕ್ಕೆ ರೂ 20,100/- ಹಣವನ್ನು ಕಡಿತಗೊಳಿಸಲಾಗುತ್ತದೆ ಎಂದರೆಸರಿ . ಹಾಗಾದರೆ ದಿಃ 24-01-2017 ರಂದು ಆರೋಪಿಯ ಮಂಜೂರಿ ಮಾಡಲಾದ ಸಾಲದ ಹಣವನ್ನು ರೂ 20,100/- ಅಂದರೆ ಎಫ್ ಡಿ ಮತ್ತು ಶೇರ ಹಣವನ್ನು ಸೇರಿಸಿಕೊಂಡು ನಿಮ್ಮ ಸಂಸೆಯಲಿಲ ಇಟ್ಟುಕೊಂಡಿರಲಾಗಿರುತ್ತದೆ ಎಂದರೆ ಸರಿ . 2017 ರಲ್ಲಿ ಇಟ್ಟಂತಹ ಹಣ ಯಾವಾಗ ದ್ವಿಗುಣ ವಾಗುತ್ತದೆ ಎಂದರೆ ನನಗೆ ನೆನಪಿಲ್ಲ . ಈಗ ಎಫ್ಡ ಡಿ ಶೇ 11 ರಂತೆ ಬಡ್ಡಿ ಕೊಡಲಾಗುತ್ತದೆ . 2017 ರಲ್ಲಿ ಇಟ್ಟಂತಹ ಹಣ 2023 ಕ್ಕೆ ದ್ವಿಗುಣ ವಾಗುತ್ತದೆ ಎಂದರೆ ಸರಿಯಲ್ಲ . 2017 ರಲ್ಲಿ ಇಟ್ಟಂತಹ ರೂ 20 ಸಾವಿರ ಎಫ್ ಡಿ ಹಣವು ಆರೋಪಿಯ ಖಾತೆಯಲ್ಲಿ ಅದು 2023 ರಲ್ಲಿ ದ್ವಿಗುಣ ವಾಗಿರುತ್ತದೆ ಎಂದರೆ ಇಲ್ಲ . ಸದ್ರಿ ರೂ 20 ಸಾವಿರ ಎಫ್ ಡಿ ಹಣವು ಈಗಲೂ ಸಹ ನಿಮ್ಮ ಸಂಸ್ದೆಯಲ್ಲಿ ಇರುತ್ತದೆ ಎಂದರೆ ಸುಳ್ಳು . ಆ ಹಣ ಏನಾಯಿತು, ಹೇಗಾಯಿತು ಎಂದು ನಿಮಗೆ ಗೊತ್ತಾ ಎಂದರೆ ಎಲ್ಲಾ ಹಣವನ್ನು ಲೆಕ್ಕಾಚಾರ ಹಾಕಿ ಅದರಲ್ಲಿ ಎಫ್ ಡಿ ಮತ್ತು ಶೇರ ಹಣವನ್ನು ಕಡಿತ ಗೊಳಿಸಿ ಉಳಿದ ಹಣವನ್ನು ಕೊಡಬೇಕು ಎಂದು ಕೇಳಲಾಗಿರುತ್ತದೆ . ಮೈನಸ್ ಮತ್ತ ಪ್ಲಸ ವ್ಯವಹಾರ ಹೇಗೆ ಇರುತ್ತದೆ ಎಂದರೆ ಸಾಲದ ಹಣಕ್ಕೆ ಎಫ್ ಡಿ interest ಪ್ಲಸ ಮಾಡಿ ಅವರ total ಹಣದಲ್ಲಿ ಮೈನಸ ಮಾಡಲಾಗುತ್ತದೆ . ಈ ರಿತೀ ವ್ಯವಹಾರ ಕಾಗದ ಪತ್ರದ ಮೂಲಕ ಮಾಡಲಾಗುತ್ತದೆ . ಆ ಕಾಗದ ಪತ್ರ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಇಲ್ಲ . ಆ ಹಣ ಜಮಾ ಆದರೆ ಮಾತ್ರ ಅದು ಮೈನಸ್ ಆಗುತ್ತದೆ . ಜಮಾ ಆಗದೆ ಇದ್ದರೆ ಮೈನಸ್

ಆಗುವುದಿಲ್ಲ. ಈ ರೀತಿ ಅವರು ಸಾಲದ ಹಣ ಕ್ರೆಡಿಟ್ ಅಗಿರುವ ಬಗೆಗ ಹಾಗೂ ಬಡ್ಡಿ ಸೇರುವ ಬಗ್ಗೆ ಹಾಗೂ ಅಸಲು ಸೇರುವ ಬಗ್ಗೆ ನಿಪಿ–14 ರ ಖಾತಾ ಉತಾರ ದಲ್ಲಿ ನಮೂದು ಆಗುತ್ತದೆ ಎಂದರೆ ಸರಿ .ಸದ್ರಿ ನಿಪಿ–14 ರಲ್ಲಿ ರೂ 20 ಸಾವಿರ ಹಣ ಕಡಿತ ಮಾಡಿದ ಬಗ್ಗೆ ಆಗಲಿ ಅದ.ವಾ ಎಫ್ ಡಿ ದ್ವಿಗುಣ ಆದ ಬಗ್ಗೆ ಕಾಣುತ್ತದಾ ಎಂದರೆ ಇಲ್ಲ . ನಿಪಿ–14 ರ ದಾಖಲಾತಿ 24–01–2017 ರಿಂದ 03–03–2023 ರ ವರೆಗೆ ಮಾತ್ರ ಉಲ್ಲೇಖ ವಾಗಿರುತ್ತದೆ ಎಂರದೆ ಅಲ್ಲಿಯವರೆಗೆ ಅವರು ಹಣವನ್ನು ತುಂಬಿರುತ್ತಾರೆ . ಹಣ ತುಂಬದೆ ಇರುವುದಕ್ಕೆ ಉಲ್ಲೇಖ ಇರುವುದಿಲ್ಲ . ಇಲ್ಲಿಯವರೆಗೆ ಆರೋಪಿಯ ಎಪ್ ಡಿ ಖಾತೆ ಯಲ್ಲಿ ಬಡ್ಡಿ ಮತ್ತು ಅಸಲು ಸೇರಿ ರೂ 50 ಸಾವಿರಕ್ಕಿಂತ ಮೆಲ್ಪಟ್ಟ ಹಣ ನಿಮ್ಮ ಸಂಸ್ದೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ . ನೀವು ನಿಪಿ–14 ರಲ್ಲಿ ಸಾಲದ ಕ್ರೆಡಿಟ್ ನಲ್ಲಿ ಅವರು ಅಸಲು ಅಥ,ವಾ ಬಡ್ಡಿ ತುಂಬಿದ ಹಣವನ್ನು ಉಲ್ಲೇಖ ಮಾಡಿಲ್ಲ ಎಂದರೆ ಸರಿ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.